Viramate jijabayi

**ವೀರಮಾತೆ ಜೀಜಾಬಾಯಿ (Notebook Activity)**

**ಮೌಲ್ಯ-** "ಮನೆಯೇ ಮೊದಲ ಪಾಠ ಶಾಲೆ, ಜನನಿ ತಾನೇ ಮೊದಲ ಗುರು."

**ಪದಗಳ ಅರ್ಥ:**

1. ಪ್ರಣಾಮ - ನಮಸ್ಕಾರ
2. ಪ್ರಾರಂಭ - ಮೊದಲು
3. ಉನ್ನತಿ - ಏಳಿಗೆ
4. ಸ್ವಾಭಿಮಾನ - ಆತ್ಮಗೌರವ

**ಅ) ಒಂದೊಂದು ವಾಕ್ಯದಲ್ಲಿ ಉತ್ತರಿಸಿ.**

1. ತಾಯಿಗೆ ಮಗನು ಏನೆಂದು ಕೇಳಿದನು?
ಉತ್ತರ: ಅಮ್ಮಾ ನನ್ನನ್ನು ಕರೆಸಿದ ಕಾರಣವೇನೆಂದು ಮಗನು ತಾಯಿಯನ್ನು ಕೇಳಿದನು.

2. ಕೊಂಡಣದುರ್ಗ ಯಾರ ವಶದಲ್ಲಿತ್ತು?
ಉತ್ತರ: ಕೊಂಡಣದುರ್ಗ ಮೊಘಲರ ವಶದಲ್ಲಿತ್ತು.

3. ಜೀಜಾಬಾಯಿಯ ತಂದೆಯ ಹೆಸರೇನು?
ಉತ್ತರ: ಜೀಜಾಬಾಯಿಯ ತಂದೆಯ ಹೆಸರು ಲಖುಜಿ ಜಾಧವರಾವ್.

4. ಶಿವಾಜಿಯ ಗುರುವಿನ ಹೆಸರೇನು?
ಉತ್ತರ: ಶಿವಾಜಿಯ ಗುರುವಿನ ಹೆಸರು ದಾದಾಜಿ ಕೊಂಡದೇವ.

**ಆ) ಕೊಟ್ಟಿರುವ ಪದ ಬಳಸಿ ಸ್ವಂತ ವಾಕ್ಯ ಬರೆಯಿರಿ.**

1. ಬಹುಮಾನ : ಮಕ್ಕಳಿಗೆ ಬಹುಮಾನ ನೀಡಿ ಉತ್ತೇಜಿಸಬೇಕು.

2. ಉದ್ಯೋಗ : ಪ್ರತಿಯೊಬ್ಬ ವ್ಯಕ್ತಿ ತಾವು ಮಾಡುವ ಉದ್ಯೋಗದಲ್ಲಿ ಪ್ರಾಮಾಣಿಕವಾಗಿರಬೇಕು.

3. ಗುಲಾಮಗಿರಿ : ಭಾರತವು ಗುಲಾಮಗಿರಿಯಿಂದ ಮುಕ್ತವಾಗಿದೆ.

4. ವೈಭವ : ದಸರಾ ಉತ್ಸವವನ್ನು ವೈಭವದಿಂದ ಆಚರಿಸುತ್ತೇವೆ.

5. ಆಶೀರ್ವಾದ : ನಮ್ಮ ತಂದೆ ತಾಯಿಯ ಆಶೀರ್ವಾದ ಯಾವಾಗಲೂ ನಮ್ಮ ಮೇಲಿರುತ್ತದೆ.

**ಉಕ್ತಲೇಖನ**

| | |
|---|---|
| 1. ಅಮ್ಮಾ | 6. ಪಟ್ಟಾಭಿಷೇಕ |
| 2. ಕುಮಾರ | 7. ಬಾಲ್ಯ |
| 3. ಸಂಭಾಷಣೆ | 8. ಗುಣಗಳು |
| 4. ದುರ್ಗದ | 9. ಹಳ್ಳಿ |
| 5. ಸಾಮಾನ್ಯ | 10. ಕನಸು |

Edit with WPS Office

Textbook Activity

**ಕೊಟ್ಟಿರುವ ಪದಗಳಲ್ಲಿ ಸರಿಯಾದ ಪದ ಆರಿಸಿ ಬಿಟ್ಟ ಸ್ಥಳದಲ್ಲಿ ಬರೆಯಿರಿ.**

( ಮಹಾಭಾರತ, ಜೀಜಾಬಾಯಿ, ರಾಯಗಡ, ಷಹಾಜಿ, ರಾಮಾಯಣ )

1. ಛತ್ರಪತಿ ಶಿವಾಜಿಯ ತಾಯಿಯ ಹೆಸರು **ಜೀಜಾಬಾಯಿ.**

2. ಜೀಜಾಬಾಯಿಯು **ಷಹಾಜಿ** ಎಂಬುವವನನ್ನು ವಿವಾಹವಾದಳು.

3. ಜೀಜಾಬಾಯಿ ಶಿವಾಜಿಗೆ ಪ್ರತಿನಿತ್ಯ **ಮಹಾಭಾರತ ಮತ್ತು ರಾಮಾಯಣ** ಕಥೆಗಳನ್ನು ಹೇಳುತ್ತಿದ್ದಳು.

4. ಶಿವಾಜಿ ಪಟ್ಟಾಭಿಷೇಕವು **ರಾಯಗಡ**ದಲ್ಲಿ ನಡೆಯಿತು.

**ಕೊಟ್ಟಿರುವ ಪದಗಮನಿಸಿ ವಿರುದ್ಧಾರ್ಥಕ ಪದ ಬರೆಯಿರಿ**

1. ಧೈರ್ಯ × ಧೈರ್ಯ
2. ಜಯ × ಅಪಜಯ
3. ಗೌರವ × ಅಗೌರವ
4. ನೀತಿ × ಅನೀತಿ

**ಮಾದರಿಯಂತೆ ಕೊಟ್ಟಿರುವ ಪದ ಗಮನಿಸಿ ಎರಡೆರಡು ಸಮನಾರ್ಥಕ ಪದಗಳನ್ನು ಬರೆಯಿರಿ.**

ಮಾದರಿ - ಸಾಗರ : ಸಮುದ್ರ, ಕಡಲು
1. ಪುತ್ರ : ಮಗ , ತನುಜ
2. ರಾಜ : ಅರಸ, ದೊರೆ
3. ಯುದ್ಧ : ಕದನ, ಹೋರಾಟ

**ಕೊಟ್ಟಿರುವ ಮಾತನ್ನು ಯಾರು? ಯಾರಿಗೆ ಹೇಳಿದರು.**

1. 'ಮಾತಾಜಿಯವರಿಗೆ ನನ್ನ ಪ್ರಮಾಣಗಳು'.
ಯಾರು? ಶಿವಾಜಿ ಹೇಳಿದನು.
ಯಾರಿಗೆ? ಜೀಜಾಬಾಯಿಗೆ ಹೇಳಿದನು.

2. 'ನೀನು ಗೆದ್ದು ನನಗೆ ಬಹುಮಾನವಾಗಿ ಕೊಡಬೇಕು'.
ಯಾರು? ಜೀಜಾಬಾಯಿ ಹೇಳಿದಳು.
ಯಾರಿಗೆ? ಶಿವಾಜಿಗೆ ಹೇಳಿದಳು.

**ಪದಗಳನ್ನು ಸರಿಯಾಗಿ ಜೋಡಿಸಿ ವಾಕ್ಯ ರಚಿಸಿ ಬರೆಯಿರಿ.**

1. ತಾಯಿ ನೀಡುತ್ತೇನೆ ಕೇಳು ಅಗತ್ಯವಾಗಿ.
ಕೇಳು ತಾಯಿ ಅಗತ್ಯವಾಗಿ ನೀಡುತ್ತೇನೆ.

2. ಚಾಣಾಕ್ಷ ಜೀಜಾಬಾಯಿ ಹೆಣ್ಣುಮಗಳು.
ಜೀಜಾಬಾಯಿ ಚಾಣಾಕ್ಷ ಹೆಣ್ಣು ಮಗಳು.

3. ಪಟ್ಟಾಭಿಷೇಕವು ಅತಿ ಶಿವಾಜಿಯ ನಡೆಯಿತು ವೈಭವದಿಂದ.
ಶಿವಾಜಿಯ ಪಟ್ಟಾಭಿಷೇಕವು ಅತಿ ವೈಭವದಿಂದ ನಡೆಯಿತು.

Edit with WPS Office

**ಭಾಷಾ ಚಟುವಟಿಕೆ**

**ಮಾದರಿಯಲ್ಲಿ ಸೂಚಿಸಿರುವಂತೆ ಸೂಕ್ತ ಪದ ರಚಿಸಿ ಬರೆಯಿರಿ**

**ಮಾದರಿ** : ಬರು + ಅಂತೆ = ಬರುವಂತೆ

1. ಹೋಗು + ಅಂತೆ = ಹೋಗುವಂತೆ
2. ನೋಡು + ಅಂತೆ = ನೋಡುವಂತೆ
3. ಮಗು + ಅಂತೆ = ಮಗುವಂತೆ

**ಮಾದರಿ** : ಹುಡುಗ + ಆಟ = ಹುಡುಗಾಟ

1. ಬಂದು + ಆಗ = ಬಂದಾಗ
2. ಕಾಡು + ಆನೆ = ಕಾಡಾನೆ
3. ಬಾಯಿ + ಆರಿಕೆ = ಬಾಯಾರಿಕೆ

**ಆವರಣದಲ್ಲಿರುವ ಪದಗಳನ್ನು ಗಮನಿಸಿ ಅವುಗಳ ಸಹಾಯದಿಂದ ಗಾದೆ ಮಾತುಗಳನ್ನು ಪೂರ್ಣ ಮಾಡಿ.**

( ಪರರಿಗೆ ಉಪಕಾರಿ, ಬಾಳಿಯಾರು, ಮೌನ ಬಂಗಾರ, ಬಾಯಿ ಮೊಸರು )

1. ತಾಳಿದವರು ಬಾಳಿಯಾರು.

2. ಕೈ ಕೆಸರಾದರೆ ಬಾಯಿ ಮೊಸರು.

3. ಮಾತು ಬೆಳ್ಳಿ ಮೌನ ಬಂಗಾರ.

4. ಮನೆಗೆ ಮಾರಿ ಪರರಿಗೆ ಉಪಕಾರಿ.

Edit with WPS Office